Sri A. G. RAMACHANDRA RAO.—On the existing circumstnces some calculations have been made and it is before the House.

Sri A. BHEEMAPPA NAIK.—I am asking you the number of students that would be admitted to the primary and secondary schools and colleges during the first year ?

Sri A. G. RAMACHANDRA RAO.—In what year ?

Sri A. BHEEMAPPA NAIK.—First year of its introduction. During the first year of the introduction, we are entitled to know how many students will be benefited by this scheme. So, how many students are you admitting into the primary schools, into the secondary schools and into the colleges during the first year of the introduction of this new reforms ?

Sri A. G. RAMACHANDRA RAO.—That would be calculated immediately a decision is taken on that.

Sri T. N. MUDALAGIRI GOWDA.—Question time is over, Sir.

Mr. SPEAKER.—That is all right. The Chair has the power to decide it. The question continues.

Sri A. BHEEMAPPA NAIK.—What is the total of expected number of students that will come under the purview of compulsory system of education.

Sri A. G. RAMACHANDRA RAO.—About 20 lakhs of students of school going age have been estimated.

Sri A. BHEEMAPPA NAIK.—Have you made provision for all these 20 lakhs of students going to school during the first year of the introduction of the scheme or are you going to select some villages and try this experiment there ?

Sri A. G. RAMACHANDRA RAO.—I have not made this calculation on the basis that all the 20 lakhs of students will go to the school on a particular day.

Sri A. BHEEMAPPA NAIK.—Within how many years are you going to make arrangements for all the 20 lakhs of students that will become available for education under the compulsory education system ?

Sri A. G. RAMACHANDRA RAO.—That depends upon so many factors, and the 12 year period is there, and further it depends on the finances available.

Sri A. BHEEMAPPA NAIK.—Under the present circumstances, some finance is recommended to be provided in the budget for the educational scheme, and is it possible to implement this educational scheme within that provision ?

Sri A. G. RAMACHANDRA RAO.—Yes, some part of the scheme.

ಶ್ರೀ ವಿ. ವೆಂಕಟಪ್ಪ.—ಆರು ವರ್ಷ ಪೂರ್ತಿ ಇರಬೇಕಾಗಿಲ್ಲವೆಂದು ಹೇಳಿದಿರಿ. ಆದರೆ ಪ್ರೈಮರಿ ವಿದ್ಯಾಭ್ಯಾಸದ ವ್ಯಾಸಂಗ ಆರುವರ್ಷಗಳಿಗೆ ಬೇಕೆಂಬುದು ನಮಿತಿಯ ಶಿಫಾರ್ಸಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಆರು ವರ್ಷ ಇರಬೇಕಾಗಿಲ್ಲ, ನಾಲ್ಕು ವರ್ಷ ಆದರೆ ಸಾಕು ಎಂದು ಹೇಗೆ ಹೇಳುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರತಿಯೊಂದು ಸ್ಕೂಲಿನಲ್ಲಿಯೂ ಆರು ವರ್ಷಗಳ ಕೋರ್ಸ್ ಇರುವುದು ಅನಾವಶ್ಯಕ.

ಶ್ರೀ ವಿ. ವೆಂಕಟಪ್ಪ.—ಪ್ರತಿಯೊಂದು ಪ್ರೈಮರಿ ಸ್ಕೂಲಿನಲ್ಲಿ ಪ್ರೈಮರಿ ವಿದ್ಯಾಭ್ಯಾಸಕ್ಕೆ ಆರು ವರ್ಷದ ವ್ಯಾಸಂಗ ಕ್ರಮವನ್ನು ಜಾರಿಗೆ ತರಬೇಕೆಂದರೆ ಏನರ್ಥ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರತಿಯೊಬ್ಬರಿಗೂ ಆರು ವರ್ಷ ವಿದ್ಯಾಭ್ಯಾಸವಾಗುವ ರೀತಿಯಲ್ಲಿ ಅವಕಾಶ ಮತ್ತು ಅನುಕೂಲ ಕಲ್ಪಿಸುವುದೆಂದರ್ಥ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ವಿದ್ಯಾ ಸುಧಾರಣೆಗಳ ಪೈಕಿ ಯಾವುದಾದರೂ ಈಗ ಜಾರಿಯಲ್ಲದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೆಲವು ಹೈಸ್ಕೂಲುಗಳಲ್ಲಿ ಇಂಗ್ಲಿಷ್ ಮಾಡಿಯಮ್ಮಿಗೆ ಬದಲು ಕನ್ನಡ ಮಾಡಿಯಂ ಜಾರಿಗೆ ತಂದಿರುವುದು ಹೊಸಸುಧಾರಣೆಯಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲಿನಿಂದಲೂ ಇತ್ತು. ಅದನ್ನೂ ಇನ್ನೂ ಕೆಲವು ಕಡೆ ಈಗ ಜಾರಿಗೆ ತಂದಿದೆ.

---

## BUSINESS OF THE HOUSE.

Mr. SPEAKER.—Question hour is over. Now discussion on the report of the Educational Reforms Committee in Mysore, will continue.

Sri A. G. RAMACHANDRA RAO (Minister for Law and Education).—I wish to make a statement regarding the programme of work before this

House. Discussion on this report may continue today and one other day; one other day will be set apart for consideration of Bills and a third day for taking up non-official Business—resolutions.

Mr. SPEAKER.—I think that will satisfy the House.

---

## DEBATE ON THE EDUCATIONAL REFORMS.

(Sri G. Shivappa rose.)

Sri J. MOHAMED IMAM (Jagalur).—I thought I was allowed to speak on the reforms proposals.

Sri A. G. RAMACHANDRA RAO.—He had spoken on the other day for about five minutes or so.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಅಧ್ಯಕ್ಷರೇ, ನಿನ್ನೆಯದಿನ ವಿದ್ಯಾಭ್ಯಾಸ ಸುಧಾರಣೆಯ ಮೇಲೆ ನಾಲ್ಕು ಮಾತುಗಳನ್ನು ಪ್ರಾಸ್ತಾವಿಕವಾಗಿ ಹೇಳಿದ್ದೇನೆ. ಈಗ ಅದನ್ನು ವಿಸ್ತರಿಸಿ ನಾಲ್ಕು ಅಂಶಗಳನ್ನು ನಿವೇದಿಸುತ್ತೇನೆ. ಈ ವರದಿಯಲ್ಲಿ ನರ್ಸರಿ ಸ್ಕೂಲುಗಳ ವಿಚಾರವಾಗಿ ತಿಳಿಸಿದೆ. ಈ ನರ್ಸರಿ ಸ್ಕೂಲ್ಸ್ ಎಂಬುವು ಮೂರು ವರ್ಷದಿಂದ ಆರು ವರ್ಷದವರೆಗೂ ಎಂದು ವಿಧಾಯಕಮಾಡಿದೆ. ಈ ನರ್ಸರಿ ಸ್ಕೂಲ್ ಸ್ಥಾಪನೆಗೆ ಹೆಚ್ಚಿನ ಹಣವು ಖರ್ಚಾಗುತ್ತದೆಯಾದುದರಿಂದ ಪ್ರತಿಯೊಂದು ಸ್ಥಳೀಯ ಸಂಸ್ಥೆಯೂ ಇದರ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಈ ರೀತಿ ಮಾಡಿರುತ್ತಾರೆಂದು ಭಾವಿಸುತ್ತೇನೆ.

ಪ್ರೈಮರಿ ವಿದ್ಯಾಭ್ಯಾಸ ಶಿಕ್ಷಣ ಮೊದಲು 8 ವರ್ಷವೆಂದಿತ್ತು. ಈ ಸಮಿತಿಯ ಶಿಫಾರ್ಸಿನಂತೆ ಅದು ಆರು ವರ್ಷದಲ್ಲಿ ಮುಗಿಯಬೇಕಾಗಿದೆ. ಇದೊಂದು ಪ್ರಗತಿದಾಯಕವಾದ ಸರಿಹೆಯೇ ಹೊರತು ಪ್ರಗತಿಗೆ ವಿರೋಧವಲ್ಲ. ಇದೇ ರೀತಿ ಮಿಡ್ಲ್ ಸ್ಕೂಲ್ ವಿದ್ಯಾಭ್ಯಾಸವನ್ನೂ ಹೈಸ್ಕೂಲ್ ವಿದ್ಯಾಭ್ಯಾಸವನ್ನೂ ಸೇರಿಸಿ, ಜೂನಿಯರ್ ಹೈಸ್ಕೂಲ್ ವ್ಯಾಸಂಗ ನಾಲ್ಕು ವರ್ಷ, ಸೀನಿಯರ್ ಹೈಸ್ಕೂಲ್ ವ್ಯಾಸಂಗ ನಾಲ್ಕು ವರ್ಷ ಎಂಬುದಾಗಿ ಸಮಿತಿಯವರು ಮಾಡಿರುವುದರಿಂದ ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿರುವ duplication of work ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಇಷ್ಟೇ ಅಲ್ಲದೆ, ಈ ಶಿಫಾರ್ಸಿನ ಪ್ರಕಾರ number of working days ಜಾಸ್ತಿಯಾಗುತ್ತದೆ. ಈಗ ಜಾರಿಯಲ್ಲಿರುವ ಶಿಕ್ಷಣ ಪದ್ಧತಿಯ ಪ್ರಕಾರ ವರ್ಷಕ್ಕೆ ಕೆಲಸದ ದಿವಸಗಳು 200 ಎಂದು ಇತ್ತು. ವಿದ್ಯಾಭ್ಯಾಸ ಸಮಿತಿಯವರ ಶಿಫಾರ್ಸಿನ ಪ್ರಕಾರ ಅದನ್ನು 250 ದಿವಸಗಳಿಗೆ ಏರಿಸಬೇಕಾಗಿದೆ. ಅಂದರೆ 50 ದಿವಸಗಳು ಜಾಸ್ತಿ ಶಾಲೆ ಕೆಲಸ ಮಾಡಬೇಕೆಂದು ನಮೂದಿಸಿರುತ್ತಾರೆ.

ಮೂಲ ಶಿಕ್ಷಣದ ವಿಚಾರವಾಗಿ ಹಲವಾರು ಟೀಕೆಗಳು ಬಂದವು. ಚಿಕ್ಕ ವಯಸ್ಸಿನ ಮಕ್ಕಳಿಗೆ ಇದು ಸಾಧ್ಯವೇ ಎಂದು ಕೆಲವರ ವಾದ. ನಾನು ಮಕ್ಕಳ ತಂದೆ. ಈ ವಿಚಾರದಲ್ಲಿ ನನ್ನ ಸ್ವಂತ ಅನುಭವವನ್ನೇ ಹೇಳುತ್ತೇನೆ. ನನ್ನ ಆರು ವರ್ಷದ ಮಗುವಿಗೆ ನಾನು ಮಾಡತಕ್ಕ ಕರ್ತವ್ಯದಲ್ಲಿ ಸ್ವಲ್ಪಮಟ್ಟಿಗೆ ತರಬೇತು ಕೊಡುತ್ತೇನೆ ಈಗ ಈ ಆರು ವರ್ಷದ ಮಗು ಅಡಿಕೆ ಬೆಳೆಯುವುದು. ಅಡಿಕೆ ಆರಿಸುವುದು ಮುಂತಾದ ಕೆಲಸವನ್ನು ಬಹು ಚೆನ್ನಾಗಿ ಮಾಡುತ್ತದೆ. ಯಾವ ಶಿಕ್ಷಣವನ್ನು ಕೊಟ್ಟರೂ ಸಹ ಮಗುವಿನ ಮನಸ್ಸಿಗೆ ಮನದಟ್ಟಾಗಿ ಹಿಡಿಯುವ ಕಾಲ ಅದು. ಇದೇ ರೀತಿಯೇ ಮೂಲಶಿಕ್ಷಣದ ಸ್ಥಿತಿಯೂ ಸಹ. ಈ ಮೂಲ ಶಿಕ್ಷಣ ಪದ್ಧತಿಯ ವಿಚಾರದಲ್ಲಿ ಮಹಾತ್ಮ ಗಾಂಧಿಯವರೂ, ಸಿ. ಆರ್. ರೆಡ್ಡಿಯವರೂ ಪ್ರೈಮರಿ ಸ್ಟೇಜ್‌ನಲ್ಲಿಯೇ ಇದು ಉತ್ತಮವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಇನ್ನು ಸೆಕೆಂಡರಿ ವಿದ್ಯಾಭ್ಯಾಸದ ವಿಚಾರವಾಗಿ ಕೆಲವು ಟೀಕೆಗಳು ಬಂದಿವೆ. ಇವೊತ್ತಿನ ದಿವಸ ಈ ವರದಿಯಲ್ಲಿ ಸೆಕೆಂಡರಿ ವಿದ್ಯಾಭ್ಯಾಸದ ವಿಚಾರವಾಗಿ ಯಾವ ಒಂದು ಅಂಶವನ್ನು ಹೇಳಿದ್ದಾರೆಯೋ ಅದನ್ನೂ ಕೂಡ ಸ್ವಾಗತಿಸುತ್ತೇನೆ, ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು, ಸ್ವಾಗತಿಸುತ್ತೇನೆ. ಅಂದಮಾತ್ರಕ್ಕೆ ಎಲ್ಲ ವಿಷಯಗಳಿಗೂ ಕೈ ಎತ್ತುವುದು ಎಂದು ತಿಳಿಯಕೂಡದು, ಇರುವ ಅಭಿಪ್ರಾಯವನ್ನು ಹೇಳುತ್ತೇನೆ. ಸೆಕೆಂಡರಿ ವಿದ್ಯಾಭ್ಯಾಸದ ವಿಚಾರವಾಗಿ ಸ್ಯಾಡ್ಲರ್‌ರವರು ಕೂಡ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದರಲ್ಲಿ ಅತಿ ಮುಖ್ಯವಾಗಿ ಕರ್ನಾಟಕಕ್ಕೆ ಟೀಕೆ ಎಂದರೆ ಈ ಸೆಕೆಂಡರಿ ವಿದ್ಯಾಭ್ಯಾಸವನ್ನು 6 ವರ್ಷ ಮಾಡಿದ್ದಾರೆ ಎಂಬುದು ಒಂದು ಮತ್ತು ಇಂಟರ್‌ಮೀಡಿಯಟ್‌ನ್ನು ಸೆಕೆಂಡರಿ ವಿದ್ಯಾಭ್ಯಾಸದ ಜೊತೆಗೆ ಸೇರಿಸಿದುತ್ತಾರೆ ಎಂಬುದು ಇನ್ನೊಂದು. ಇದು ಬಹಳ ತಪ್ಪು. atmosphere ಹೊರಟುಹೋಗುತ್ತದೆ' ಎಂದು ಮಾನ್ಯ ಸ್ನೇಹಿತರು ಹೇಳಿದರು. ಯಾವ ಉದ್ದೇಶಕ್ಕಾಗಿ ಅವರು ಈ ಇಂಟರ್‌ಮಿಡಿಯಟ್‌ನ್ನು ಸೆಕೆಂಡರಿಯೊಳಗೆ ಸೇರಿಸಿದ್ದಾರೆ ಎಂಬುದನ್ನು ತಾವೆಲ್ಲರೂ ಅರ್ಥಮಾಡಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ. ಈ ಸಮಿತಿಯ ವರದಿಯನ್ನು ವಿಮರ್ಶಾತ್ಮಕವಾಗಿ ಓದಿದ್ದೇ ಆದರೆ ಖಂಡಿತವಾಗಿಯೂ ಇದಕ್ಕೆ ಬಲವಾದ ಕಾರಣಗಳಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಆಧಾರಗಳೂ ಇವೆ. ಇದನ್ನು ಸಮಿತಿಯವರ ಕೇವಲ ಒತ್ತಾಯಕ್ಕಾಗಿ ಸೇರಿಸಿದ್ದಲ್ಲ. 30 ವರ್ಷಗಳ ಹಿಂದೆಯೇ ಇದನ್ನು ಸ್ಯಾಡ್ಲರ್ ಮಹಾಶಯರು ಹೇಳಿದ್ದರು. ಅದನ್ನು ಇವೊತ್ತು ಮಾಡಬೇಕಾಗಿದೆ, ಈಗ ನಮ್ಮ generationನ್ನೇ ಹಾಳಾಗಿ ಹೋಗಿದೆ. ಇಂಥಾ ಸನ್ನಿವೇಶದಲ್ಲಿ ಇವೊತ್ತು ಸಮಿತಿಯವರು ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಶಿಫಾರಸು ಮಾಡಿರುವುದು ಸಾಹಸದ ಕೆಲಸ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸ್ಯಾಡ್ಲರ್ ಕಮಿಷನ್ನಿನವರ ಬೆಂಬಲವೊಂದೇ ಅಲ್ಲದೆ ಅನೇಕ ಮಹನೀಯರ ಬೆಂಬಲವಿದೆ. ಡಾಕ್ಟರ್ ಸಿ. ಆರ್. ರೆಡ್ಡಿಯವರು ಹೇಳಿದ್ದಾರೆ, ಡಾಕ್ಟರ್ ರಾಧಾಕೃಷ್ಣನ್‌ರವರು ಹೇಳಿದ್ದಾರೆ. ಇಂಡಿಯನ್ ಯೂನಿವರ್ಸಿಟಿ ಕಮೀಷನ್‌ನವರು ಕೂಡ ಒತ್ತಾಯವಾಗಿ ಹೇಳಿದ್ದಾರೆ.

> Intermediate marks an end of secondary education and a beginning of University education.

ಇದರಲ್ಲಿ ಏನು ಅನುಕೂಲ ಇದೆ ಅದನ್ನು ಪಡೆದುಕೊಳ್ಳಬೇಕು ಎಂಬ ದೃಷ್ಟಿಯಿಂದ ಯೋಚನೆಮಾಡಿದರೆ ಗೊತ್ತಾಗುತ್ತದೆ. ಏಕ್‌ದಂ ತೊಂದರೆಯಾಗುತ್ತದೆ ಎಂದು ಯೋಚನೆಮಾಡಿದರೆ ತಕ್ಷಣ ಗೊತ್ತಾಗುವುದು